ಮದ್ಯ ವ್ಯವಹಾರದಲ್ಲಿ ತೊಡಗಿದ ವಾಹನಗಳ ಸಂಖ್ಯೆ

೧೭೦. ಶ್ರೀ ಪೆರಿಕಲ್ ಎ. ಮಲ್ಲಪ್ಪ(ಚಿಕ್ಕಪೇಟೆ).—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಅಬಕಾರಿ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಮದ್ಯ ವ್ಯವಹಾರದಲ್ಲಿ ತೊಡಗಿದ್ದ ಕಾರು ಜೀಪು, ಮತ್ತು ಇತರೆ ವಾಹನಗಳ ಒಟ್ಟು ಸಂಖ್ಯೆ ಎಷ್ಟು ?

(ಆ) ಈ ರೀತಿ ಜಪ್ತಿ ಆಗಿರುವ ವಾಹನಗಳನ್ನು ಬಹಿರಂಗವಾಗಿ ಅಬಕಾರಿ ಕಮೀಷನರ್ ಬೆಂಗಳೂರುರವರ ಕಛೇರಿ ಎದುರುಗಡೆ ಇಡಲಾಗಿದೆಯೇ ?

(ಇ) ಹಾಗಿದ್ದಲ್ಲಿ ಸರಕಾರವು ಇಂಥ ವಾಹನಗಳನ್ನು ಇವುಗಳ ಪ್ರಕರಣಗಳ ಇತ್ಯರ್ಥವಾಗುವ ತನಕ ಅವುಗಳಿಗೆ ಹರಾಜಿನಲ್ಲಿ ಯೋಗ್ಯ ಬೆಲೆ ಬರುವಂತೆ ರಕ್ಷಿಸಲಾಗುತ್ತಿದೆಯೇ ?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು).—

	ಅಬಕಾರಿ ವರ್ಷ		
ಅ)	೧೯೮೬-೮೮	೧೯೮೮-೮೯	೧೯೮೯-೯೦
ಕಾರು	೩೦	೨೧	೩೬
ಜೀಪು	೫	೮	೫
ಇತರೆ ವಾಹನ	೩೧೯	೩೧೯	೨೬೫
	೩೫೪	೩೪೮	೩೦೬
ಒಟ್ಟು	—	೧೦೦೮	

ಆ) ಇಲ್ಲ

ಇ) ಜಪ್ತಿಯಾದ ವಾಹನಗಳನ್ನು ಸಂರಕ್ಷಿಸಲಾಗುತ್ತಿದೆ.

ಬೆಂಗಳೂರು ಡೈರಿ ಏಜೆಂಟರುಗಳ ಸಂಖ್ಯೆ

೧೭೬. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಗ್ರಾಮಾಭಿವೃದ್ಧಿ ಮಂತ್ರಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಬೆಂಗಳೂರು ಡೈರಿ ಏಜೆಂಟರುಗಳ ಸಂಖ್ಯೆ ಎಷ್ಟು ?

ಆ) ಈ ಪೈಕಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಚಿಕ್ಕಪೇಟೆ, ಬಳೇಪೇಟೆ, ಸಿಟಿ ಮಾರ್ಕೆಟ್ ಕೆಂಪಾಪುರ ಅಗ್ರಹಾರ, ಕಾಟನ್ ಪೇಟೆ ಎ. ಎಸ್. ಆಚಾರ್ ಸ್ಟ್ರೀಟ್ ಟಿ.ಸಿ.ಎಂ. ರಾಯನ್ ರೋಡ್, ಅವಿನ್ಯೂ ರಸ್ತೆ, ನಗರ್ತಪೇಟೆ, ಪೋಲೀಸ್ ರಸ್ತೆ ಮತ್ತು ಲಾಲಬಿಂಡವಾಡಿಗಳಲ್ಲಿ ಇರುವ ಏಜೆಂಟರುಗಳು ಎಷ್ಟು ?

ಇ) ೧೯೯೦ ರ ಜನವರಿಯಿಂದ ಕೊಟ್ಟಿರುವ ಹೊಸ ಏಜೆನ್ಸಿಗಳು ಎಷ್ಟು ?

ಈ) ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚಿನ ಹಾಲಿನ ಬೇಡಿಕೆ ಇರುವುದರಿಂದ ಹೊಸ ಏಜೆನ್ಸಿಯನ್ನು ಕೊಡುವ ಯಾವುದಾದರೂ ಪ್ರಸ್ತಾವನೆ ಇದೆಯೇ ?